ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ರಸ್ತೆಗಳ ದುರಸ್ತಿ

೧೬೨೧. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧ ಕಣಿಗಲ್–ಗುಬ್ಬಾಗೆರೆ–ಇಡಗೂರು–ಸಿ.ಎಸ್. ಪುರ.

೨ ಕುಣಿಗಲ್–ಹೆಬ್ಬೂರು–ಮಾವಿನಹಳ್ಳಿ–ಸಿ.ಎಸ್. ಪುರ.

೩ ಕುಣಿಗಲ್–ನಾಗಸಂದ್ರ–ಇಡಗೂರು.

ಈ ಮೂರು ಮಾರ್ಗಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಮೂರು ಮಾರ್ಗಗಳನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡು ಸದರಿ ಮಾರ್ಗಗಳ ದುರಸ್ತಿಗಾಗಿ ಕ್ರಮವೇನಾದರೂ ತೆಗೆದುಕೊಳ್ಳುವರೇ ?

ಇ) ಹಾಗಿದ್ದಲ್ಲಿ, ಎಷ್ಟು ದಿವಸದೊಳಗೆ ದುರಸ್ತಿಯನ್ನು ಮಾಡಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ೧ ಕುಣಿಗಲ್–ಗುಬ್ಬಾಗೆರೆ–ಇಡಗೂರು–ಸಿ. ಎಸ್. ಪುರ.

೨ ಕುಣಿಗಲ್–ನಾಗಸಂದ್ರ–ಇಡಗೂರು.

ಈ ಎರಡು ರಸ್ತೆಗಳು ಭಾಗಶಃ ಲೋಕೋಪಯೋಗಿ ಇಲಾಖೆ ವಶದಲ್ಲಿದ್ದು, ಈ ಭಾಗಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ.

೩ ಕಣಿಗಲ್–ಹೆಬ್ಬೂರು–ಮಾವಿನಹಳ್ಳಿ–ಸಿ.ಎಸ್. ಪುರ.

ಈ ರಸ್ತೆಯು ಪೂರ್ತಿಯಾಗಿ ಲೋಕೋಪಯೋಗಿ ಇಲಾಖೆಯ ವಶದಲ್ಲಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ,

ಆ) ಸಧ್ಯಕ್ಕೆ ಲೋಕೋಪಯೋಗಿ ಇಲಾಖೆಗೆ ಮೇಲಿನ ರಸ್ತೆಗಳ ಉಳಿದ ಭಾಗಗಳನ್ನು ತೆಗೆದುಕೊಳ್ಳುವ ಪ್ರಸ್ತಾವನೆ ಇಲ್ಲ.

ಇ) ರಸ್ತೆಗಳ ದುರಸ್ತಿಯನ್ನು ಹಣಕಾಸಿನ ಲಭ್ಯತೆಗನುಗುಣವಾಗಿ ತೆಗೆದುಕೊಳ್ಳುವುದನ್ನು ಪರ್ಯಾಲೋಚಿಸಲಾಗುವುದು.

ರಾಮಧಾಳ್ ನೀರಾವರಿ ಯೋಜನೆ

೧೬೫೧. ಶ್ರೀ ಸಂಜಯಕ್ಯಾನ್‌ಮತ್ (ಗುಳೇದಗುಡ್ಡ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಮಧಾಳ ನೀರಾವರಿ ಯೋಜನೆಯಿಂದ ಎಷ್ಟು ಹೆಕ್ಟೇರಂಗಳಿಗೆ ನೀರು ಒದಗಿಸಲಾಗುವುದು.

ಆ) ೧೯೪೪–೪೫ರಂದು ಅದರ ಅಂದಾಜು ವೆಚ್ಚ ವೆಷ್ಟು ?

ಇ) ಸದರಿ ಯೋಜನೆಯು ತಾಂತ್ರಿಕವಾಗಿ ಅರ್ಹತೆಯನ್ನು ಪಡೆದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು).—

ಅ) ೨೨,೨೬೭ ಹೆಕ್ಟೇರಂಗಳು.

ಆ) ೪೫೨೫ ಲಕ್ಷ ರೂಪಾಯಿಗಳು.

ಇ) ಹೌದು, ಈ ಯೋಜನೆಗೆ ತಾಂತ್ರಿಕ ಸಮಿತಿಯು ಒಪ್ಪಿಗೆ ನೀಡಿರುತ್ತದೆ.

ಕನಕಪುರ ತಾಲ್ಲೂಕಿನ ಗ್ರಾಮಂಗಳಲ್ಲಿ ಕರಡಿಯಿಂದ ಕಚ್ಚಿಸಿಕೊಂಡು ಆಸ್ಪತ್ರೆ ಸೇರಿದವರ ಬಗ್ಗೆ

೧೪೪೬. ಶ್ರೀ ಕೆ. ಎಲ್. ಶಿವಲಿಂಗೇಗೌಡ (ಸಾತನೂರು).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂಮಿಟ್ಟು ಉತ್ತರಿಸುವರೇ ?

೧) ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿ ದಂಟೂರು, ಹಲಸೂರು, ಸೂರ್‌ಕಾಯಿ ದೊಡ್ಡಿ ಮತ್ತು ಕೆಮ್ಮಾಳ್ ಗ್ರಾಮಂಗಳಲ್ಲಿ ಕಳೆದ ತಿಂಗಳು ಕರಡಿಯಿಂದ ಕಚ್ಚಿಸಿಕೊಂಡು ಆಸ್ಪತ್ರೆ ಸೇರಿದವರ ಸಂಖ್ಯೆ ಎಷ್ಟು ?

೨) ಹಾಗೆ ಕರಡಿಯಿಂದ ಕಚ್ಚಿಸಿಕೊಂಡಿರುವವರಿಗೆ ಏನು ಪರಿಹಾರ ಒದಗಿಸಿದೆ.

೩) ಈ ಕರಡಿಯನ್ನು ಕಾಡಿಗೆ ಓಡಿಸಲು ಅಥವಾ ಕೊಲ್ಲಲು ಸರ್ಕಾರದವರು ಕೈಗೊಂಡ ಕ್ರಮ ಏನು ?

೪) ಕನಕಪುರ ತಾಲ್ಲೂಕು ಸಾತನೂರು ಹೋಬಳಿಯಲ್ಲಿರುವ ಬಸವನ ಬೆಟ್ಟವನ್ನು ಅಭಯಾರಣ್ಯ ವೆಂದು ಘೋಷಿಸಿದ್ದು ಯಾವಾಗ ?

೫) ಅಭಯಾರಣ್ಯವೆಂದು ಘೋಷಣೆ ನಂತರ ಸದರಿ ಅರಣ್ಯ ಮಧ್ಯದಲ್ಲಿರುವ ಕಂದಾಯ ಗ್ರಾಮಂಗಳಾದ ಸೋಲಿಗೆರೆ ಮತ್ತು ರೋಣಚ ಗಂಡಿ ಗ್ರಾಮದ ಕಂದಾಯ ಜಮೀನಿನಲ್ಲಿ ಕಾಡು ಮೃಗಗಳ ಹಾವಳಿಯಿಂದ ಬೆಳೆ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ಕೊಡಲಾಗಿದೆಯೆ ಅಥವಾ ಕೊಡಲು ಯೋಚಿಸಲಾಗಿದೆಯೇ ಹೇಗೆ ತಿಳಿಸಿ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

೧) ಇಲಾಖೆಯ ಗಮನಕ್ಕೆ ಬಂದಿಲ್ಲ.

೨) ಉದ್ಭವಿಸುವುದಿಲ್ಲ.

೩) ಸಾಮಾನ್ಯವಾಗಿ ಅಂತಹ ಪ್ರಕರಣಗಳು ವರದಿಯಾದ ಕೂಡಲೇ ಪ್ರಾಣಿಯನ್ನು ಕಾಡಿಗೆ ಹಿಂದಕ್ಕೆ ಓಡಿಸಲು ಇಲಾಖಾ ಸಿಬ್ಬಂದಿಯವರು ಕ್ರಮ ಕೈಗೊಳ್ಳುತ್ತಾರೆ. ವನ್ಯಪ್ರಾಣಿಗಳನ್ನು ಕೊಲ್ಲಲಾಗುವುದಿಲ್ಲ.

೪) ಬಸವನ ಬೆಟ್ಟದಮನ್ನಾ ಜಂಗಲಿಯನ್ನು ಅಭಯಾರಣ್ಯವೆಂದು ಘೋಷಿಸಿರುವುದಿಲ್ಲ.

೫) ಬೆಳೆ ಪರಿಹಾರವಾಗಿ ಈ ಪ್ರದೇಶದಲ್ಲಿ ಕೊಟ್ಟಿರುವ ಮೊತ್ತವು ಈ ಕೆಳಗಿನಂತಿದೆ.

ಬೆಳೆ ಪರಿಹಾರ			ದನಕರುಗಳ ಸಾವು		ಮಾನವನ ಸಾವು ಅಂಗವಿಕಲತೆ	
ಪ್ರಕರಣಗಳ ಸಂಖ್ಯೆ		ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ	ಪ್ರಕರಣಗಳ ಸಂಖ್ಯೆ	ಮೊತ್ತ
೧೯೮೪-೮೫	೫	೧೬೫೦-೦೦	೨	೧೦೦೦-೦೦		
೧೯೮೫-೮೬ ೩೧ ಡಿಸೆಂಬರ್ ಕೊನೆವರೆಗೆ	೭	೨೫೨೫-೦೦	೪	೨೨೦೦-೦೦	೧	೫೦೦೦